ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ರೋಗಿಗಳಿಗೆ ರಾಜ್ಯ ಮಟ್ಟದ ವೈದ್ಯರಿಂದ ಸೂಕ್ತ ಸಲಹೆ ಸೂಚನೆಗಳು ದೊರೆಯುವಂತೆ ಮಾಡಲಾಗಿದೆ. ಆರೋಗ್ಯ ಜಾಗೃತಿ ಕಾರ್ಯಕ್ರಮಗಳನ್ನು ಎಲ್ಲ ಕ್ಷೇಮ ಕೇಂದ್ರಗಳನ್ನು ತಲುಪುವಂತೆ ಮಾಡಿ, ಸಮಗ್ರ ಆರೋಗ್ಯ ರಕ್ಷಣೆಗೆ ಪ್ರೋತ್ಸಾಹ ನೀಡಲಾಗುತ್ತಿದೆ.

### ಸಿಬ್ಬಂದಿಗೆ ಕೌಶಲ ತರಬೇತಿ

ರಾಜ್ಯದ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುವ ಎಲ್ಲ ವೈದ್ಯ ಮತ್ತು ಅರೆ ವೈದ್ಯಕೀಯ ಸಿಬ್ಬಂದಿ, ಆರೋಗ್ಯ ಕಾರ್ಯಕರ್ತರಿಗೆ ಹೊಸ ಬದಲಾವಣೆಗಳಿಗೆ ಅನುಗುಣವಾಗಿ ಕೌಶಲ ತರಬೇತಿಗಳನ್ನು ನೀಡಲಾಗುತ್ತಿದೆ. ಇದರಿಂದ ಆರೋಗ್ಯ ರಕ್ಷಣಾ ಸಿಬ್ಬಂದಿ ವೈದ್ಯಕೀಯ ಕ್ಷೇತ್ರದ ಆವಿಷ್ಕಾರಗಳ ಬಗ್ಗೆ ಅರಿತು, ಗುಣಮಟ್ಟದ ಸೇವೆ ನೀಡಲು ಅನುಕೂಲವಾಗುತ್ತಿದೆ. ತುರ್ತು ಸಂದರ್ಭದಲ್ಲಿ ಚಿಕಿತ್ಸೆಗೆ ಕೌಶಲವೃದ್ಧಿ ಸಹಕಾರಿಯಾಗಿದೆ. ಈ ಮೂಲಕ ಕ್ಷೇಮ ಕೇಂದ್ರಗಳ ಬಲವರ್ಧನೆಯೂ ಸಾಕಾರವಾಗುತ್ತಿದೆ.

### ರೋಗ ಪತ್ತೆ ಸುಲಭ

ರೋಗಿಗೆ ಯಾವ ಕಾಯಿಲೆ ಬಂದಿದೆ? ಅದು ಯಾವ ಮಾದರಿಯ ರೋಗ? ಬೇರೆ ರೋಗವೂ ಇದೆಯೇ... ಹೀಗೇ ವಿವಿಧ ಪ್ರಶ್ನೆಗಳಿಗೆ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಲ್ಲಿ ಉತ್ತರ ದೊರೆಯುತ್ತವೆ. ಈ ಕೇಂದ್ರಗಳಲ್ಲಿ ರೋಗ ನಿರ್ಧಾರಕ್ಕೆ ಸಂಬಂಧಿಸಿದಂತೆ ಪ್ರಾರಂಭಿಕ ಹಂತದಲ್ಲಿ ಏಳು ಹೆಚ್ಚುವರಿ ಪರೀಕ್ಷೆಗಳನ್ನು ಪರಿಚಯಿಸಲಾಯಿತು.

ಸಮುದಾಯದ ಹಂತದಲ್ಲಿಯೂ ರೋಗಗಳನ್ನು ಸುಲಭವಾಗಿ ಪತ್ತೆ ಮಾಡಲು ಕ್ರಮ ಕೈಗೊಳ್ಳಲಾಯಿತು. ರಕ್ತದಲ್ಲಿನ ಹಿಮೊಗ್ಲೋಬಿನ್ ಪ್ರಮಾಣ, ಅಧಿಕ ರಕ್ತದೊತ್ತಡ, ಮಲೇರಿಯಾ, ಡೆಂಗ್ಯು, ಎಚ್‌ಐವಿಗೆ (ರ್‍ಯಾಪಿಡ್ ಡಯಾಗ್ನಾಸ್ಟಿಕ್ ಕಿಟ್) ಗರ್ಭಿಣಿಯರಿಗೆ ಮೂತ್ರ ಪರೀಕ್ಷೆ, ಸಕ್ಕರೆ ಕಾಯಿಲೆಗೆ ಅಲ್ಬುಮಿನ್/ಮೂತ್ರ ಪರೀಕ್ಷೆ, ಸಕ್ಕರೆ ಕಾಯಿಲೆಗೆ ರಕ್ತ ಪರೀಕ್ಷೆ, ವಿಐಎ (visual inspection with acetic acid) ವಿಧಾನವನ್ನು ಬಳಸಿ ಗರ್ಭಕಂಠದ ಪರೀಕ್ಷೆ ಸೇರಿದಂತೆ ವಿವಿಧ ಪರೀಕ್ಷೆಗಳನ್ನು ಕ್ಷೇಮಕೇಂದ್ರಗಳಲ್ಲಿ ಒದಗಿಸಲಾಗುವುದು. ಉಪ್ಪಿನಲ್ಲಿ ಅಯೋಡಿನ್ ಅಂಶ ಪರೀಕ್ಷೆ ಫೈಲೇರಿಯಾಸಿಸ್, ಟಿಬಿ ಕಾಯಿಲೆ ಕಫ ಸಂಗ್ರಹ, ಕುಡಿಯುವ ನೀರಿನಲ್ಲಿ ಗುಣಮಟ್ಟ ಪರೀಕ್ಷೆಗಳನ್ನು ಮನೆ ಬಾಗಿಲ ಬಳಿಯಲ್ಲೇ ನಡೆಸುವ ವ್ಯವಸ್ಥೆಯನ್ನು ಕ್ಷೇಮ ಕೇಂದ್ರಗಳು ಒದಗಿಸುತ್ತಿವೆ.

2021ರಿಂದ ಈಗ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 63 ಪರೀಕ್ಷೆಗಳು ಹಾಗೂ ಉಪಕೇಂದ್ರ ಮಟ್ಟದಲ್ಲಿ 14 ಪರೀಕ್ಷೆಗಳು ಲಭ್ಯವಿರುತ್ತದೆ.

### ತಾಯಿ ಮತ್ತು ಮಗುವಿನ ಆರೈಕೆ

ತಾಯಿ ಆರೋಗ್ಯವಾಗಿದ್ದರೆ ಹುಟ್ಟುವ ಮಗು ಆರೋಗ್ಯಪೂರ್ಣ. ತಾಯಿಯ ಉತ್ತಮ ಆರೈಕೆಯಿಂದಲೇ ಮಗು ಪರಿಪೂರ್ಣವಾಗಿ ಬೆಳೆಯಲು ಸಾಧ್ಯ. ಹೀಗಾಗಿ, ತಾಯಿ ಮತ್ತು ಶಿಶು ಆರೋಗ್ಯಕ್ಕೆ ಆದ್ಯತೆ ನೀಡಲೇಬೇಕು. ಹೆರಿಗೆ ವೇಳೆ ಮತ್ತು ನಂತರ ತಾಯಂದಿರ ಮರಣ ಪ್ರಮಾಣದಲ್ಲೂ ಗಣನೀಯ ಇಳಿಕೆ ತರಲು ಸಾಧ್ಯ. ಗರ್ಭಾವಸ್ಥೆ ಹಾಗೂ ಬಾಣಂತಿ ಅವಧಿಯಲ್ಲಿ ತಲಾ ಆರು ತಿಂಗಳು ಉಚಿತವಾಗಿ ಐಎಫ್‌ಎ ಮತ್ತು ಕ್ಯಾಲ್ಸಿಯಂ ಮಾತ್ರೆಗಳನ್ನು ನೀಡಲಾಗುತ್ತದೆ. ಜನನಿ ಸುರಕ್ಷಾ ಯೋಜನೆಯಡಿ ಪ್ರೋತ್ಸಾಹ ಧನವನ್ನೂ ನೀಡಲಾಗುತ್ತದೆ. ತಾಯಂದರಿಗಿರುವ ಹಲವು ಯೋಜನೆಗಳನ್ನು ಫಲಾನುಭವಿಗಳಿಗೆ ತಲುಪಿಸಲು ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳು ಸಹಾಯಕ.



### ಔಷಧಗಳ ಪೂರೈಕೆ

ರಾಷ್ಟ್ರೀಯ ಆರೋಗ್ಯ ಅಭಿಯಾನ ವಿನ್ಯಾಸಗೊಳಿಸಿರುವ ವಿಸ್ತೃತ ಸೇವಾ ಪ್ಯಾಕೇಜ್‌ಗಳ ಪ್ರಕಾರ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ ರೋಗಿಗಳಿಗೆ ಉಚಿತವಾಗಿ ಔಷಧಗಳನ್ನು ಪೂರೈಸಲಾಗುತ್ತಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಿಗೆ ಚುಚ್ಚುಮದ್ದು, ಔಷಧ, ಮುಲಾಮುಗಳು, ಮಾತ್ರೆಗಳು ಸೇರಿದಂತೆ 164 ಅಗತ್ಯ ಔಷಧಗಳನ್ನು ಒಳಗೊಂಡ ಪಟ್ಟಿಯನ್ನು ಕೇಂದ್ರ ಸರ್ಕಾರ ಶಿಫಾರಸು ಮಾಡಿದೆ. ಉಪಕೇಂದ್ರ ಎಚ್‌ಡಬ್ಲ್ಯುಸಿಗಳಿಗೆ 81 ಮಾದರಿ ಔಷಧಗಳನ್ನು ಸೂಚಿಸಲಾಗಿದೆ. ಆರೋಗ್ಯ ಕೇಂದ್ರಗಳ ಸಮುದಾಯ ಆರೋಗ್ಯಾಧಿಕಾರಿಗಳ ಮೂಲಕ ಕಾಲಕಾಲಕ್ಕೆ ಔಷಧಗಳನ್ನು ಒದಗಿಸುವ ವ್ಯವಸ್ಥೆ ಮಾಡಲಾಗಿದೆ.

### ನವಜಾತ ಶಿಶುಗಳ ಆರೈಕೆ

ಪ್ರತಿ ನವಜಾತ ಶಿಶುವಿಗೆ ಹುಟ್ಟಿದ ತಕ್ಷಣ ಮತ್ತು ಮೊದಲ 28 ದಿನಗಳವರೆಗೆ ಕೆಲವು ಅಗತ್ಯ ಆರೈಕೆಗಳ ಅವಶ್ಯಕವಾಗಿರುತ್ತದೆ. ಇದು ಬಹಳ ಮುಖ್ಯ. ಒಂದು ವರ್ಷದಲ್ಲಿ ಸಾಯುತ್ತಿರುವ ಪ್ರತಿ

| ರಾಜ್ಯದ ಟೆಲಿ ಸಮಾಲೋಚನೆ ವಿವರ | |
|---|---|
| ಆರೋಗ್ಯ ಮಂತ್ರ ಕ್ಷೇಮ ಕೇಂದ್ರಗಳ ಸಮಾಲೋಚನೆ (ಎಚ್‌ಡಬ್ಲ್ಯುಸಿ) | 19,12,502 |
| ಕ್ಷೇಮ ಕೇಂದ್ರ ಮತ್ತು ಹೊರರೋಗಿಗಳ ಸಮಾಲೋಚನೆ (ಎಚ್‌ಡಬ್ಲ್ಯುಸಿ ಒಪಿಡಿ) | 39,60,648 |
| ಹೊರರೋಗಿಗಳಿಗೆ ಸಂಬಂಧಿಸಿದಂತೆ ನಡೆದ ಸಮಾಲೋಚನೆ (ಒಪಿಡಿ) | 20,48,146 |
| 15 ದಿನದಲ್ಲಿ ನಡೆದ ಸರಾಸರಿ ಸಮಾಲೋಚನೆಗಳು | 12,443 |